ಬೆಂಗಳೂರು ನಗರಕ್ಕೆ ಹಗುರ ರೈಲು ಹಾಗೂ ಮೆಟ್ರೋರೈಲು ಯೋಜನೆ

1360 (104) ಶ್ರೀ ಕಟ್ಟಾಸುಬ್ರಮಣ್ಯನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ಹಗುರ ರೈಲು ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ಸಂಬಂಧ ಪಟ್ಟವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆಯೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ಪ್ರಗತಿಯಲ್ಲಿ ಹಂತವೇನು;

ಇ) ಇದರ ಜೊತೆಗೆ ಬೆಂಗಳೂರು ನಗರಕ್ಕೆ ಮೆಟ್ರೋ ರೈಲು ಯೋಜನೆಗಾಗಿದ ವರದಿ ಸಲ್ಲಿಸಲು ಯಾರಿಗಾದರು ಸೂಚಿಸಲಾಗಿದೆಯೇ;

ಈ) ಈ ವರದಿ ಯಾವಾಗ ಬರುವ ಸಾಧ್ಯತೆಗಳಿವೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಬಿಎಂಆರ್‌ಟಿಎಲ್ ಸಂಸ್ಥೆಯ ಶಿಫಾರಸ್ಸನ್ನು ಸರ್ಕಾರವು ಪರಿಶೀಲಿಸಿ, ಪರ್ಯಾಯ ಯೋಜನೆಯನ್ನು ಪರಿಶೀಲಿಸುವಂತೆ ಕೋರಿದೆ. ಅದರಂತೆ ಬಿಎಂಆರ್‌ಟಿಎಲ್ ಸಂಸ್ಥೆಯು ಬೆಂಗಳೂರಿನಲ್ಲಿ ಮೆಟ್ರೋ ರೈಲನ್ನು ಅಳವಡಿಸಲು ದೆಹಲಿ ಮೆಟ್ರೋ ರೈಲು ನಿಗಮಕ್ಕೆ ವಿವರವಾದ ಯೋಜನಾ ವರದಿಯನ್ನು ನೀಡುವಂತೆ ಕೋರಿದೆ. ಹಾಗೂ ಈ ವರದಿಯನ್ನು ಸದ್ಯದಲ್ಲೆ ನಿರೀಕ್ಷಿಲಾಗಿದೆ.

ಇ) ಹೌದು. ಬೆಂಗಳೂರು ನಗರಕ್ಕೆ ಮೆಟ್ರೋ ರೈಲ್ಲನ್ನು ಅಳವಡಿಸಲು ದೆಹಲಿ ಮೆಟ್ರೋ ನಿಗಮಕ್ಕೆ ವಿವರವಾದ ಯೋಜನಾ ವರದಿಯನ್ನು ನೀಡುವಂತೆ ಕೋರಲಾಗಿದೆ.

ಈ) ಮಾರ್ಚ್ 2003ರ ಅಂತ್ಯದೊಳಗೆ ವರದಿಯು ಬರುವ ನಿರೀಕ್ಷೆ ಇದೆ.

ಶಿಗ್ಗಾಂವ್ ತಾಲ್ಲೂಕು ಹುಲಗೂರನಲ್ಲಿ 33 ಕೆ.ವಿ. ಸ್ಟೇಷನ್ ನಿರ್ಮಾಣ

1362 (915) ಶ್ರೀ ಖಾದ್ರಿ ಎಸ್.ಎಸ್. (ಶಿಗ್ಗಾಂವ್): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಹುಲಗೂರದಲ್ಲಿ 33 ಕೆ.ವಿ. ಸಬ್ ಸ್ಟೇಷನ್ ನಿರ್ಮಾಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಈ ಯೋಜನೆಗೆ ನಿಗದಿಪಡಿಸಿದ ಹಣವೆಷ್ಟು; ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಶಿಗ್ಗಾಂವ್ ತಾಲ್ಲೂಕು ಹುಲಗೂರದಲ್ಲಿ ಒಂದು 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಸ್ಥಾಪನೆಯ ಪ್ರಸ್ತಾವನೆಗೆ ನಿಗಮದ ತಾಂತ್ರಿಕ ಸಮಿತಿಯು ಅಕ್ಟೋಬರ್ 2001 ರಲ್ಲಿ ಅನುಮೋದನೆ